<u>ದಿನಾಂಕಃ **17/06/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ **1**ನೇ ಎದುರುದಾರರ ಪರವಾಗಿ ಶ್ರೀ ಎ.ಜಿ.ಎಂ. ವಕೀಲರಿಂದಃ</u>

ಘಟನೆ ನಡೆದ ದಿನ ನಾನು ಹೊನ್ನವಳ್ಳಿ ದೇವರಾಜು ರವರ ಮನೆಗೆ ಕೆಲಸಕ್ಕೆ ಹೋಗಿದ್ದೆನು. ಕೂಲಿ ಕೆಲಸಕ್ಕೆ ಅವರೇ ನನಗೆ ಹಣವನ್ನು ಕೊಟ್ಟಿರುತ್ತಾರೆ. ಭತ್ತದ ಹುಲ್ಲನ್ನು ಬಡಿದ ನಂತರ ಅದನ್ನು ಅರೆಯುವ ಉದ್ದೇಶದಿಂದ ಕಣಕ್ಕೆ ಹರಡಿದ್ದರು ಎಂದರೆ ನಿಜ. ಟ್ರ್ಯಾಕ್ಟರ್ ಹುಲ್ಲಿನ ಮೇಲೆ ಹೋಗುವಾಗ ಅದರ ಸುತ್ತ ಮುತ್ತ ಯಾರು ಹೋಗುವ ಆಗಿಲ್ಲ ಎಂದರೆ ನಿಜ. ಆ ದಿನ ನಾನೇ ಟ್ರ್ಯಾಕ್ಟರ್ ಚಾಲಕನ ಗಮನಕ್ಕೆ ಬಾರದೆ ನಿರ್ಲಕ್ಷದಿಂದ ಕಣದೊಳಕ್ಕೆ ಹೋದೆನು ಎಂದರೆ ಸರಿಯಲ್ಲ. ನಾನು ಪಕ್ಕದಲ್ಲಿ ನಿಂತು ಹುಲ್ಲನ್ನು ನೂಕುತಿದ್ದೆನು. ಆಗ ಟ್ರ್ಯಾಕ್ಟರ್ ಬಂದು ಅಪಘಾತ ಮಾಡಿತು. ಆ ನಂತರ ನಾನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆನು. ಗಾಯಗಳ ಬಗ್ಗೆ ವೈದ್ಯರು ಕೇಳಿ ಬರೆದುಕೊಂಡರು. ಅಪಘಾತದ ಬಗ್ಗೆ ಪುಟ್ಟಲಕ್ಷ್ಮೀ ದೂರನ್ನು ಕೊಟ್ಟರು. ನಿಪಿ-2 ರಲ್ಲಿರುವ ಮಾಹಿತಿ ಸರಿ ಇದೆ. ದೂರಿನ ಪ್ರಕಾರ FIR ಆಗಿದೆ ಎಂದರೆ ನಿಜ. ಆ ನಂತರ ನಾನು ಹಾಸನದ ಸರ್ಕಾರಿ ಆಸ್ಪತ್ರೆಗೆ ಹೋದೆನು. ಅಲ್ಲಿಂದ ಮತ್ತೆ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ಹೋದೆನು. ನಿಪಿ-9 ರಂತೆ ಟ್ರ್ಯಾಕ್ಟರ್ ನಿಂದ ಅಪಘಾತ ಆಗಿದೆ ಎಂದು ದಾಖಲೆ ಕೊಟ್ಟಿದ್ದಾರೆ ಎಂದರೆ ನಿಜ. ಆ ದಿನ ಟ್ರ್ಯಾಕ್ಟರ್ ಚಾಲಕನಿಗೆ ಪರವಾನಗೆ ಇತ್ತು. ಆ ವಾಹನಕ್ಕೆ ವಿಮೆ ಕೂಡ ಚಾಲ್ತಿಯಲ್ಲಿತ್ತು ಎಂದರೆ ನಿಜ. ನಿಪಿ-3 ರನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಿಂದ 1ನೇ ಎದುರುದಾರರು ತಡೆಯಾಜ್ಞೆ ತಂದಿದ್ದಾರೆ ಎಂದರೆ ನಿಜ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು